ಊ) ವಿಷಯ:– ವೀರ ಮದಕರಿ ನಾಯಕರ ಸಮಾಧಿ ಸ್ಥಳವನ್ನು ರಕ್ಷಣೆ ಮಾಡುವ ಮತ್ತು ಅದನ್ನು ಯಾತ್ರಾಸ್ಥಳವನ್ನಾಗಿ ಮಾಡುವ ಬಗ್ಗೆ.

ಶ್ರೀ ಕೆ. ಶಿವಮೂರ್ತಿ (ಮಾಯಕೊಂಡ):– ಮಾನ್ಯ ಅಧ್ಯಕ್ಷರೆ, ಮಾಯಕೊಂಡದಲ್ಲಿ ಚಿತ್ರದುರ್ಗದ ಪಾಳೇಗಾರನಾದ ವೀರ ಮದಕರಿ ನಾಯಕನ ಸಮಾಧಿ ಇದೆ. ಅಲ್ಲಿಗೆ ಪ್ರತಿದಿವಸ ಯಾತ್ರಾರ್ಥಿಗಳು ಬಂದು ಹೋಗುತ್ತಿದ್ದಾರೆ. ನಿಧಿ ಸಿಗುತ್ತದೆ ಎಂದು ಈ ಸಮಾಧಿಯನ್ನು ಒಡೆದು ಹಾಕಿಬಿಟ್ಟಿದ್ದಾರೆ. ಅದನ್ನು ರಕ್ಷಣೆ ಮಾಡಬೇಕು ಮತ್ತು ಆ ಸ್ಥಳವನ್ನು ಯಾತ್ರಾಸ್ಥಳವನ್ನಾಗಿ ಮಾಡುವುದಕ್ಕೆ ಬೇಕಾದ ಸೌಲಭ್ಯಗಳನ್ನು ಒದಗಿಸಬೇಕೆಂದು ತಮ್ಮ ಮೂಲಕ ನಾನು ಕೇಳಬಯಸುತ್ತೇನೆ.

ಶ್ರೀಮತಿ ಉಮಾಶ್ರೀ (ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಿಳೆ ಮತ್ತು ಮಕ್ಕಳ ಕಲ್ಯಾಣ ಸಚಿವರು):– ಮಾನ್ಯ ಅಧ್ಯಕ್ಷರೆ, ವೀರ ಮದಕರಿ ನಾಯಕರ ಸಮಾಧಿ ಸ್ಥಳವನ್ನು ಸಂರಕ್ಷಿತ ಎಂದು ದಿನಾಂಕ 2–7–1993ರಂದು ರಾಜ್ಯದ ಪ್ರಾಚ್ಯವಸ್ತು ಇಲಾಖೆಯಿಂದ ಘೋಷಣೆ ಮಾಡಲ್ಪಟ್ಟಿದೆ. ಈ ಸಮಾಧಿಯ ಸರ್ವೆ ನಂಬರ್ 200ರಲ್ಲಿದ್ದು ಖಾಸಗಿ ಒಡೆತನಕ್ಕೆ ಒಳಪಟ್ಟಿರುತ್ತದೆ. ಖಾಸಗಿಯಾಗಿ ಮೂಲಭೂತ ಸೌಲಭ್ಯಗಳಾದ ದಾರಿ, ಕುಡಿಯುವ ನೀರು, ಶೌಚಾಲಯ ಮುಂತಾದ ಅನುಕೂಲತೆಗಳನ್ನು ಸಾರ್ವಜನಿಕ ಪ್ರವಾಸಿಗರಿಗೆ ಒದಗಿಸಿ ಕೊಡಲಾಗಿದೆ. ಈ ಸ್ಮಾರಕವನ್ನು ಇನ್ನೂ ಉತ್ತಮ ರೀತಿಯಲ್ಲಿ ಸಂರಕ್ಷಿಸುವುದಕ್ಕೆ ಜಿಲ್ಲಾಡಳಿತ ಮತ್ತು ಪ್ರಾಚ್ಯ ವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ವತಿಯಿಂದ ಕೈಗೊಳ್ಳಲಾಗುವುದು.

ಶ್ರೀ ಕೆ. ಶಿವಮೂರ್ತಿ:– ನಿಧಿ ಇದೆ ಎಂದು ಹೇಳಿ ಅದನ್ನು ಒಡೆದು ಹಾಕಿದ್ದಾರೆ. ದಯವಿಟ್ಟು ಅದನ್ನು ರಕ್ಷಿಸಬೇಕು.

ಶ್ರೀಮತಿ ಉಮಾಶ್ರೀ:– ಆಯಿತು, ಕ್ರಮ ಕೈಗೊಳ್ಳುತ್ತೇವೆ.